


## ಸಮುದ್ರ ಮಥನ




**ಸ್ವಾರಸ್ಯಕರ**

ಭೂಮಿ ಏಕೆ ಬಿಸಿಯಾಗುತ್ತಿದೆ? ಸುಧಾ ಹೆಗಡೆ ಲೇಖನ ಸ್ವಾರಸ್ಯಕರವಾಗಿದೆ. ಮಾಲ್ಡೀವ್ಸ್ ಮುಳುಗಲಿದೆ ಎಂಬ ವಾಕ್ಯ ಆಘಾತಕಾರಿಯಾಗಿತ್ತು.

ಅರ್ಜುನ್ ವಿ. ಮಂಡ್ಯ/ ಪಿ.ಗೋವಿಂದರಾಜ್, ಶಿವಮೊಗ್ಗ

**ಮನನೀಯ**

ವೈನತೇಯರ ವಿಚಾರ ಲಹರಿ 'ಗೋಡೆ' ಮನನೀಯ.

-ಮ. ಪ್ರಿಯ, ಮೈಸೂರು

**ಬೆಳಕಿಗೆ ಬಂದ ಕಲಾವಿದ**

'ಬೆಳಕಿಗೆ ಬಾರದ ಕಲಾವಿದ ಬೇಂದ್ರೆ' ಓದಿ ಅನೇಕ ಪರಿಮಳ ಹೂಗಳು ಕಾಡಿನಲ್ಲಿ ಹುಟ್ಟಿ ಅವುಗಳ ಸುವಾಸನೆ ಗಾಳಿಯಲ್ಲಿ ವ್ಯಯವಾಗಿ ಹೋಗುತ್ತಿರುವ ನೆನಪಾಯಿತು.

-ಹೇಮಾವತಿ ಜೈನ್, ಹೂವಿನ ಹಡಗಲಿ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

**ಹೇಗೆ ಸಾಧ್ಯ?**

1964 ರಲ್ಲಿ ಗೋವಿಂದ ಬೇಂದ್ರೆ ತಂದೆ ತೀರಿಕೊಂಡಾಗ 11 ವರ್ಷದ ಬಾಲಕನ ಮೇಲೆ ಮನೆಯ ಜವಾಬ್ದಾರಿ ಬಿತ್ತು ಎಂದಿದೆ. ಆದರೆ 1932ರಲ್ಲಿ ಹುಟ್ಟಿದ ಬೇಂದ್ರೆಗೆ 1964ರಲ್ಲಿ ತಂದೆ ಸಾಯುವಾಗ 32 ವರ್ಷಗಳಾಗಿರಬೇಕಲ್ಲವೇ?

-ಟಿ.ಆರ್. ದಾಶರಥಿ, ಬೆಂಗಳೂರು

**ರಾಜು ತಾಳಿಕೋಟಿ ಕಚಗುಳಿ**

ರಂಗ ಕಂಪಿನ ರಾಜು ತಾಳಿಕೋಟಿ ಬಗ್ಗೆ ರಚಿಹ ಲೇಖನ ಅರ್ಥಪೂರ್ಣವಾಗಿತ್ತು. ಕಲಿಯುಗದ ಕುಡುಕ ನಾಟಕದಲ್ಲಿನ ಅವರ ಹಾಸ್ಯ ಪಾತ್ರ ನೋಡುಗರಿಗೆ ಕಚಗುಳಿ ಇಟ್ಟಿದೆ.

-ರವೀಂದ್ರನಾಥ ಶಿ. ಯಡಹಳ್ಳಿ, ಇಲಕಲ್ಲ

**12 ವರ್ಷ ಹೇಗೆ?**

ಕು.ರ.ಸೀ. ಲೇಖನದಲ್ಲಿ ಶ್ರೀನಾಥ್ ಅವರು 'ಅಣ್ಣ ತಂಗಿ' ಚಿತ್ರದ ಬಗ್ಗೆ ಪ್ರಸ್ತಾಪಿಸುತ್ತಾ, ಹನ್ನೆರಡು ವರ್ಷವಾದರೂ ಈಗಲೂ ಜನರನ್ನು ಆಕರ್ಷಿಸುತ್ತಿದೆ ಎಂದಿದ್ದಾರೆ, ಆದರೆ 'ಅಣ್ಣ ತಂಗಿ' ತೆರೆ ಕಂಡದ್ದು 1957-58ರಲ್ಲಿ

-ಬಿ.ಎಸ್. ರಮೇಶ್, ಬೆಂಗಳೂರು

**ಮುಪ್ಪಿಗೂ ಚೇತನ!**

ನನಗೀಗ 67 ವರ್ಷ ವಯಸ್ಸು, ಶಾರೀರಿಕವಾಗಿ ಇನ್ನೂ ಸದೃಢವಾಗಿದ್ದರೂ, ನನ್ನ ಮನಸ್ಸಿಗೆ ಮುಪ್ಪಾಗಿದೆ ಎಂಬ ಚಿಂತೆಯಲ್ಲಿರುವಾಗಲೇ ಡಾ. ಲೀಲಾವತಿ ದೇವದಾಸ ಅವರ ಮುಪ್ಪಿನ ಬಗ್ಗೆ ಬಂದ ಲೇಖನ ಓದಿ ಮತ್ತೆ ಮನಸ್ಸು ಪ್ರಫುಲ್ಲವಾಗಿದೆ.

-ಎಚ್.ಆರ್. ದೇಸಾಯಿ, ರಾಯಚೂರು/ ವಿಭಾ ಮುರಳೀಧರ್, ತುಮಕೂರು/ ಎಚ್.ಆನಂದಕುಮಾರ್, ಚಿತ್ರದುರ್ಗ

**ಅತಿಯಾಯಿತು!**

ನಾಗತಿಹಳ್ಳಿ- ಐಂದ್ರಿತಾ ಕಪಾಳಮೋಕ್ಷ ರಂಪಾಟ ಅತಿಯಾಯಿತು. ಅಪ್ಪ-ಮಗಳ ಬಾಂಧವ್ಯದ ದೃಷ್ಟಿಯಲ್ಲಿ ಅಂತ್ಯ ಹಾಡಬಹುದಿತ್ತಲ್ಲವೇ? ಚಿತ್ರರಂಗವಷ್ಟೇ ಅಲ್ಲದೆ ಎಲ್ಲಾ ಕ್ಷೇತ್ರಗಳಲ್ಲೂ ಇಂತಹ ಪ್ರಕರಣಗಳು ಸರ್ವೇಸಾಮಾನ್ಯ. ಹಾಗಾಗಿ ಇದಕ್ಕೆ ವಿಶೇಷ ಗಮನಹರಿಸುವ ಅಗತ್ಯವಿಲ್ಲ.

-ಹೆಚ್.ಎನ್. ವಿಶ್ವನಾಥ್, ಶಿವಮೊಗ್ಗ

**ಅದ್ಭುತ-ಸೂಪರ್**

ಕಾಮನ ಬಿಲ್ಲು, ಕಾಮಿಕ್ಸ್, ಎಳೆಯರ ಅಂಗಳ ಅದ್ಭುತವಾಗಿರುತ್ತವೆ. ನಗೆಹೊನಲು ನಲ್ಲಿ ಬರುವ ವ್ಯಂಗ್ಯಚಿತ್ರಗಳು ಸೂಪರ್.

-ವಾಸುಕಿ ಸಿ.ಜಿ., ಶಿರಸಿ

**ಸಖಿ- ಔಚಿತ್ಯ ಪೂರ್ಣ**

ಭುವನಾ ಸುರೇಶ ಅವರ 'ಸಖೀ ಯಾರೇ ನನ್ನವನು' ಧಾರಾವಾಹಿಯಲ್ಲಿ ಕೋಲಾರ, ಮುಳಬಾಗಿಲು, ಆವನಿ, ಕಾಶೀಹಳ್ಳಿ ಸುತ್ತ ಮುತ್ತಲ ಊರುಗಳನ್ನು ಬಳಸಿರುವುದು ಔಚಿತ್ಯಪೂರ್ಣವಾಗಿದೆ.

-ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು

**ಮುಂಬೈಯಲ್ಲಿ ನಾಟಕ ಸ್ಪರ್ಧೆ**

ಮುಂಬೈನ ಕರ್ನಾಟಕ ಸಂಘವು ಅಖಿಲ ಭಾರತ ಕುವೆಂಪು ಸ್ಮಾರಕ 2010ರ ಏಕಾಂಕ ಜಾನಪದ ನಾಟಕ ಸ್ಪರ್ಧೆ ಫೆ.12ರಿಂದ ನಡೆಯಲಿದ್ದು, ಅರ್ಜಿ ಆಹ್ವಾನಿಸಿದೆ. ಆಸಕ್ತರು ಜ.10 ರ ಒಳಗಾಗಿ 500ರೂ. ಪ್ರವೇಶ ಧನದೊಂದಿಗೆ ಕರ್ನಾಟಕ ಸಂಘ, ಡಾ.ಎಂ. ವಿಶ್ವೇಶ್ವರಯ್ಯ ಸ್ಮಾರಕ ಮಂದಿರ, ಸಿಎಸ್‌ಎಂ ಮಾರ್ಗ್, ಟಿಎಚ್ ಕಟಾರಿಯಾ ಮಾರ್ಗ್, ಮಾತುಂಗ ರಸ್ತೆ ಸ್ಟೇಶನ್ (ಪಶ್ಚಿಮ), ಮುಂಬೈ- 400016ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ 022- 24377022/ 24379645 ಸಂಪರ್ಕಿಸಬಹುದು.